## ಗಾಂಧಿನಗರ ಪೋಸ್ಟ್

# ಗಾಂಧಿನಗರದಲ್ಲೊಂದು ಕನ್ನಡ ಶಾಲೆ!

ಸಾವಿರಾರು ಕನ್ನಡ ಶಾಲೆಗಳನ್ನು ಮುಚ್ಚಲು ಸರ್ಕಾರ ಯೋಚಿಸುತ್ತಿರುವಾಗ, ಕನ್ನಡ ಶಾಲೆಗಳ ಕುರಿತು ಸಹೃದಯರ ಗಮನ ಸೆಳೆಯುವಂತಹ ಚಿತ್ರವೊಂದು ಗಾಂಧಿನಗರದಲ್ಲಿ ರೂಪುಗೊಳ್ಳುತ್ತಿದೆ. ಚಿತ್ರದ ಹೆಸರು, 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ' ಕಾಸರಗೋಡು. ರಿಷಬ್ ಶೆಟ್ಟಿ ಈ ಶಾಲೆಯ ನಿರ್ದೇಶಕರು.

ಕಾಸರಗೋಡಿನಂತಹ ಗಡಿನಾಡಿನ ಶಾಲೆಯ ಮಕ್ಕಳು ಅನುಭವಿಸುವ ಸಮಸ್ಯೆಗಳ ಕುರಿತಾದ ಕಥೆ ಹೊಂದಿರುವ ಈ ಸಿನಿಮಾ, ಎಲ್ಲ ಕನ್ನಡ ಶಾಲೆಗಳ ಕನ್ನಡಿಯೂ ಹೌದು ಎನ್ನುವ ಇಂಗಿತ ನಿರ್ದೇಶಕರ ಮಾತಿನಲ್ಲಿದೆ. ಶಾಲೆಯ ಜೊತೆಜೊತೆಗೆ ಗಡಿನಾಡಿನ ಸ್ಥಿತಿಗತಿಯ ಬಗ್ಗೆಯೂ ಸಿನಿಮಾ ಮಾತನಾಡುತ್ತದಂತೆ. ಅಂದ ಹಾಗೆ, ಕನ್ನಡ ಶಾಲೆಯ ಕುರಿತು ಸಿನಿಮಾ ಮಾಡುತ್ತಿರುವವರಲ್ಲಿ ರಿಷಬ್ ಮೊದಲಿಗರೇನಲ್ಲ. ಈಗಾಗಲೇ 'ಪ್ರಾರ್ಥನೆ' ಹೆಸರಿನ ಚಿತ್ರವೊಂದನ್ನು ಸದಾಶಿವ ಶೆಣೈ ರೂಪಿಸಿದ್ದಾರೆ. ಆದರೆ, ರಿಷಬ್‌ರ ಶಾಲೆ ಜನಪ್ರಿಯ ಶೈಲಿಯಲ್ಲಿ ರೂಪುಗೊಂಡಿರುವ ಸಿನಿಮಾ.

ಅನಂತನಾಗ್ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಲಿದ್ದಾರೆ. ಚಿತ್ರದ ವಸ್ತು ಗಂಭೀರವಾಗಿದ್ದರೂ ಅನಂತ್‌ರ ಶಿಕ್ಷಕನ ಪಾತ್ರ ಎಲ್ಲರನ್ನು ರಂಜಿಸುವಂತೆ ಇದೆಯಂತೆ. ಅಂತೆಯೇ ತಮ್ಮ ಚಿತ್ರಕ್ಕೆ ಸಂಗೀತದ ಸ್ಪರ್ಶ ನೀಡಲು ರಿಷಬ್ ಪ್ರಯತ್ನಿಸಿದ್ದಾರಂತೆ. ಒಂಬತ್ತು ಹಾಡುಗಳ ಜೊತೆಗೆ, ಸಮುದ್ರ ತೀರ ಹಾಗೂ ಹಸಿರು ಪರಿಸರ ಕೂಡ ಚಿತ್ರದ ಮಾಧುರ್ಯ–ಸೌಂದರ್ಯ ಹೆಚ್ಚಾಗಲು ಪೂರಕವಾಗಿವೆ.

ವಾಸುಕಿ ವೈಭವ್ ಸಂಗೀತ ಹಾಗೂ ವೆಂಕಟೇಶ್ ಅಂಗುರಾಜ್ ಛಾಯಾಗ್ರಹಣ ಚಿತ್ರಕ್ಕಿದೆ. ಶಾಲೆಯ ಚಿತ್ರೀಕರಣ ಈಗಾಗಲೇ ಮುಗಿದಿದ್ದು ಆದಷ್ಟು ಬೇಗನೆ ಚಿತ್ರವನ್ನು ತೆರೆ ಕಾಣಿಸಲು ಚಿತ್ರತಂಡ ಉದ್ದೇಶಿಸಿದೆ.




# ಹೊಸ 'ಶಾಸನ'

'ಚಿನ್ನದ ಗೊಂಬೆ', 'ಅಹಿಂಸೆ' ಎನ್ನುವ ಸಿನಿಮಾಗಳನ್ನು ನಿರ್ದೇಶಿಸಿದ್ದ ಪಂಕಜ್ ಬಾಲನ್ ಅವರ ಹೊಸ ಸಿನಿಮಾ ಕಳೆದ ವಾರ ಮುಹೂರ್ತ ನಡೆಸಿದೆ. ಚಿತ್ರದ ಹೆಸರು 'ಶಾಸನ'. ಎರಡು ಶತಮಾನಗಳ ಹಿಂದಿನ ಕಥೆಯನ್ನು 'ಶಾಸನ'ದ ಮೂಲಕ ಪಂಕಜ್ ಹೇಳಹೊರಟಿದ್ದಾರೆ. ಎರಡು ಶತಮಾನಗಳ ಕಥೆಗಳನ್ನು ಒಂದೇ ಟ್ರ್ಯಾಕ್‌ನಲ್ಲಿ ಹೇಳಲು ನಿರ್ದೇಶಕರು ಉದ್ದೇಶಿಸಿದ್ದಾರೆ. ಚಿತ್ರದ ನಾಯಕ ಶ್ರೀಧರ್. ರಂಜಿತಾ ಮತ್ತು ಹರ್ಷಿತಾ ಚಿತ್ರದ ನಾಯಕಿಯರು. ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡಿ ಅನುಭವ ಹೊಂದಿರುವ ಧನು ಖಳನಾಯಕನಾಗಿ ತಮ್ಮ ಅದೃಷ್ಟಪರೀಕ್ಷೆಗೆ ಹೊರಟಿದ್ದಾರೆ. ಬ್ಯಾಂಕ್ ಜನಾರ್ದನ್, ಜಯಸಿಂಹ ಮುಸುರಿ, ಕುರಿ ಸುನೀಲ್ ತಾರಾಗಣದಲ್ಲಿರುವ ಪ್ರಮುಖರು.

ಸಸ್ಪೆನ್ಸ್ ಕಥೆಯನ್ನು ಹೊಂದಿರುವ 'ಶಾಸನ' ಚಿತ್ರವನ್ನು ಜನ ಮೆಚ್ಚುವಂತೆ ರೂಪಿಸುವ ಉದ್ದೇಶ ನಿರ್ದೇಶಕರದು. ಬೆಂಗಳೂರು ಸುತ್ತಮುತ್ತ ಹಾಗೂ ಚಿಕ್ಕಮಗಳೂರಿನ ಪರಿಸರದಲ್ಲಿ ಚಿತ್ರದ ಶೂಟಿಂಗ್ ನಡೆಸಲು ಅವರು ಉದ್ದೇಶಿಸಿದ್ದಾರೆ. ಕಾರ್ತೀಕ್ ವೆಂಕಟೇಶ್ ಸಂಗೀತ ಸಂಯೋಜನೆ ಚಿತ್ರಕ್ಕಿದೆ. ಜುಲೈ ಕೊನೆಯ ಭಾಗದಿಂದ ಚಿತ್ರೀಕರಣ ಆರಂಭವಾಗಲಿದೆ.

